ಅ) ಈ ರೀತಿ ರ್ಯಾಟಿಫಿಕೇಷನ್ ಆರ್ಡರ್‌ಗಾಗಿ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕು ಭೂ ನ್ಯಾಯ ಮಂಡಳಿಯಲ್ಲಿ ಬಾಕಿ ಇರುವ ಪ್ರಕರಣಗಳೆಷ್ಟು ?

ಇ) ತೀರ್ಥಹಳ್ಳಿಯ ಭೂ ನ್ಯಾಯ ಮಂಡಳಿಗೆ ಶಿವಮೊಗ್ಗ ಉಪವಿಭಾಗಾಧಿಕಾರಿಗಳನ್ನೇ ಅಧ್ಯಕ್ಷರನ್ನಾಗಿ ನೇಮಿಸಿರುವುದರಿಂದ ಈ ಪ್ರಕರಣಗಳನ್ನು ಶೀಘ್ರವಾಗಿ ಇತ್ಯರ್ಥಪಡಿಸಲು ಸಾಧ್ಯವಾಗದಿರುವುದರಿಂದ ಬೇರೆ ಅಧಿಕಾರಿಯನ್ನು ನೇಮಿಸಲು ಸರ್ಕಾರ ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ರಮೇಶ್.ಸಿ. ಜಿಗಜಿಣಗಿ (ಕಂದಾಯ ಸಚಿವರು) :

ಅ) ಅವಕಾಶ ಇದೆ.

ಆ) 3617 ಪ್ರಕರಣಗಳು ಬಾಕಿ ಇವೆ.

ಇ) ಸರ್ಕಾರದ ಅಧಿಸೂಚನೆ ಸಂಖ್ಯೆ : ಕಂಇ 185 ಎಲ್‌ಆರ್‌ಎ 95 ದಿನಾಂಕ 9-7-97 ರಂತೆ ತೀರ್ಥಹಳ್ಳಿ ತಾಲ್ಲೂಕಿನ ಭೂ ನ್ಯಾಯ ಮಂಡಳಿ ಅಧ್ಯಕ್ಷರನ್ನಾಗಿ ಅರಣ್ಯ ವ್ಯವಸ್ಥಾಪನಾಧಿಕಾರಿ, ಶಿವಮೊಗ್ಗ ಇವರನ್ನು ನೇಮಿಸಿ ಆದೇಶ ಹೊರಡಿಸಿದೆ.

ಆರಾಧನಾ ಯೋಜನೆ ಕುರಿತು

2985 - ಶ್ರೀ ಅಪ್ಪಚ್ಚು ರಂಜನ್ ಎಂ.ಪಿ. (ಸೋಮವಾರಪೇಟೆ) : ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕಳೆದ ಮೂರು ವರ್ಷದಲ್ಲಿ ಆರಾಧನಾ ಯೋಜನೆಯಡಿಯಲ್ಲಿ ಎಷ್ಟು ಹಣವನ್ನು ರಾಜ್ಯದಲ್ಲಿ ಬಿಡುಗಡೆ ಮಾಡಲಾಗಿದೆ, (ಜಿಲ್ಲಾವಾರು ಮತ್ತ ತಾಲ್ಲೂಕುವಾರು ವಿವರಗಳನ್ನು ಕೊಡಿಸುವುದು) ?

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ (ಮುಜರಾಯಿ ಸಚಿವರು) :

ಅ) ಆರಾಧನಾ ಯೋಜನೆಯಡಿಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಈ ಕೆಳಕಂಡಂತೆ ಹಣ ಬಿಡುಗಡೆ ಮಾಡಲಾಗಿದೆ.

ವರ್ಷ	ರೂ.
1994-95	6.71 ಕೋಟಿ
1995-96	4.50 ಕೋಟಿ
1996-97	5.00 ಕೋಟಿ

ಈ ಯೋಜನೆಯಡಿಯಲ್ಲಿ ಉತ್ತರ ಕನ್ನಡ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ತಾಲ್ಲೂಕುವಾರು ಹಾಗೂ ಉಳಿದ ಜಿಲ್ಲೆಗಳಲ್ಲಿ ವಿಧಾನ ಸಭಾ ಕ್ಷೇತ್ರವಾರು ಸಮಾನಾಂತರವಾಗಿ ಹಣ ಬಿಡುಗಡೆ ಮಾಡಲಾಗಿದೆ (ಜಿಲ್ಲಾವಾರು ವಿವರದ ತಃಖ್ತೆ ಲಗತ್ತಿಸಿದೆ)

ಅನುಬಂಧ

ಕ್ರ.ಸಂ.	ಜಿಲ್ಲೆಗಳ ಹೆಸರು	1994-95	1995-96	1996-97
1	2	3	4	5
1.	ಬೆಂಗಳೂರು ಗ್ರಾ	38,56,787-00	19,34,000-00	21,73,900-00
2.	ಬೆಂಗಳೂರು ನಗರ	74,20,148-00	34,01,000-00	32,60,850-00
3.	ಬೆಳಗಾವಿ	46,78,216-00	34,81,200-00	39,13,000-00
4.	ಬಿಜಾಪುರ	90,20,180-00	29,01,000-00	32,60,850-00
5.	ಬೀದರ್	16,46,072-00	11,60,400-00	13,04,340-00
6.	ಬಳ್ಳಾರಿ	24,04,118-00	17,40,600-00	19,56,510-00
7.	ಚಿಕ್ಕಮಗಳೂರು	16,46,072-00	13,53,800-00	15,21,730-00
8.	ಚಿತ್ರದುರ್ಗ	29,09,485-00	21,27,400-00	23,91,290-00
9.	ದಕ್ಷಿಣ ಕನ್ನಡ	49,20,180-00	29,01,000-00	32,60,850-00
10.	ಧಾರವಾಡ	46,78,216-00	34,81,200-00	39,13,020-00
11.	ಗುಲ್ಬರ್ಗಾ	34,14,823-00	25,14,200-00	28,26,070-00
12.	ಹಾಸನ	21,51,429-00	15,47,200-00	17,39,120-00
13.	ಕೋಲಾರ	35,62,144-00	23,20,800-00	26,08,680-00
14.	ಕೊಡಗು	8,88,036-00	5,80,200-00	6,52,470-00
15.	ಮಂಡ್ಯ	24,04,108-00	17,40,600-00	19,56,510-00
16.	ಮೈಸೂರು	42,72,850-00	30,94,400-00	34,78,240-00
17.	ರಾಯಚೂರು	29,09,465-00	21,27,400-00	23,91,290-00
18.	ಶಿವಮೊಗ್ಗ	26,56,787-00	19,34,000-00	21,73,900-00
19.	ತುಮಕೂರು	51,14,843-00	25,14,200-00	28,26,070-00
20.	ಉತ್ತರ ಕನ್ನಡ	16,46,072-00	21,45,400-00	23,91,290-00
	ಒಟ್ಟು	**6,71,00,000-00**	**4,50,00,000-00**	**5,00,00,000-00**